ಸವರ್ತಾ ಆನಂದ ಪಡ್ತಿದ್ದ. ಒಂದ್ಯೆದಾರು ಪುಟ ತಿರುವಿ ನೋಡಿ, ತಾನು ಮಾಡಿದ ಕೆಲಸಕ್ಕೆ ತನಗೇ ರೋಮಾಂಚನವಾಗ್ತಿತ್ತು. ಒಳಗೊಳಗೇ ಎದೆಯುಬ್ಬಿ ಪುಳಕಗೊಳ್ತಾಯಿದ್ದ. ಯೀಗ ಅವನು ನನ್ನ ಕರೀಲಿ ಎಂದು ಭಗವಂತನಿಗೇ ಸವಾಲು ಹಾಕಿದ.

ಅವತ್ತು ಒಂದು ಭಾನುವಾರ. ಬಾಕಿ ಕೊಡಬೇಕಾದರೆಲ್ಲಾ ಮನೇನಗಿರ್ತಾರೆ. ನೆವ ಹೇಳಿ, ಸುಳ್ಳು ಹೇಳಿ ತಪ್ಪುಸ್ಕೋಬಹುದಷ್ಟೆ. ಮಧ್ಯಾಹ್ನದ ಹೊತ್ತಿಗೆ ಒಂದಿಷ್ಟು ಮನೆ ಸುತ್ತಿದ್ದ. ಅದ್ಯಾವುದೋ ವಠಾರ. ಜೋರಾಗಿ ಗಲಾಟೆ ಕೇಳ್ತಾಯಿತ್ತು. ಯಾರೋ ಕೂಗಾಡ್ತಾ ಇದ್ರು. ಇನ್ಯಾರೋ ಅಳ್ತಾಯಿದ್ರು. ಜಂಬಂಣ ನಿಧಾನವಾಗಿ ವಠಾರದ ಕಡೆ ನಡೆದ. ವಠಾರದ ಬಾಗಿಲಲ್ಲೇ ಗಲೀಜು ಹರೀತಿತ್ತು. ವನ್ನಮೂನಿ ಹಸಿರು ನೀರು ಮಡುಗಟ್ಕೆಂಡು ನಿಂತಿತ್ತು. ಅದುನ್ನ ದಾಟಿ, ಒಂದು ಹಾಸುಗಲ್ಲಿನ ಮೇಲೆ ನಾಜೂಕಾಗಿ ಕಾಲಿಟ್ಟು ವಠಾರದ ಒಳಗೆ ಬಂದ. ತಾನು ನೋಡಿದ್ದನ್ನು ನಂಬಕಾಗಲಿಲ್ಲ. ವಠಾರದಲ್ಲಿನ ಯಾವ ಮನೆಗೂ ಸುಣ್ಣ ಬಣ್ಣ ಇರಲಿಲ್ಲ. ಎಲ್ಲಾ ಗೋಡೆಗಳ ಮೇಲೂ ಸಣ್ಣ ಪುಟ್ಟ ಗಿಡಗಳು ಬೆಳಕೊಂಡಿದ್ವು. ಎಲ್ಲೆಲ್ಲೂ ತೇವ. ಆ ಮನೆಗಳಿಗೆ ಗೋಡೆಗಳಿದ್ವಲ್ಲಾ ಅದೇ ಆಶ್ಚರ್ಯ. ಮನೆಗಳಿಂದ ಜನ ಹೊರಗೆ ಬಾಗಿಲಿಗೆ ಬಂದು ನಿಂತಿದ್ದರು. ಎಲ್ಲರ ಮುಖಗಳಲ್ಲೂ ಹೆದರಿಕೆ. ಹೆಂಗಸರು ಬಾಯಿಗೆ ಸೆರಗು ಒತ್ತಿ ನಿಂತಿದ್ದರು. ಒಂದೆರಡು ಮಕ್ಕಳು ಇಣುಕಿ ಗಲಾಟೆ ಕೇಳ್ತಾಯಿದ್ದ ಮನೆ ಕಡೆ ತಲೆ ಹಾಕಿದ್ವು. ಅದ್ಯಾವ ಮನೆಯಲ್ಲಿ ಗಲಾಟೆ ಕೇಳ್ತಾಯಿತ್ತೋ ಆ ಮನೆ ಹತ್ರ ಬಂದಾಗ ಜಂಬಂಣನಿಗೆ ಒಂದು ಗಂಡಸಿನ ಗಂಟಲು ಕೇಳುಸ್ತು.

'ಯಿನ್ನಾ ತಡೆಯದಾಗಾದಿಲ್ಲ. ಆರು ತಿಂಗಳಿಂದ ಯಿವತ್ತು ನಾಳೆ ಅಂತಿದೀಯ. ವಂಬತ್ತು ತಿಂಗ್ಳ ಬಾಡಿಗೆ ವುಳುಸ್ಕಂಡಿದೀಯಾ. ನಂಗದೆಲ್ಲಾ ಗೊತ್ತಿಲ್ಲ. ಯೀಗಿಂದೀಗ್ಲೇ ಮನೆ ಕಾಲಿ ಮಾಡು.'

ಜಂಬಂಣನಿಗೆ ಗಂಟಲಿನ ಗುರುತು ಹತ್ತಿತು. ಬಂಡೀ ಸಿದ್ದಪ್ಪಂದು. ಹಗುರಾಗಿ ನಡೆದು ಆ ಮನೆಯ ಬಾಗಿಲಲ್ಲಿ ನಿಂತ. ಒಂದು ಹೆಂಗಸು. ಅವಳ ಹಿಂದೆ ವಯಸ್ಸಿಗೆ ಬಂದ ಇನ್ನೊಂದು ಹುಡುಗಿ. ಆಕೆಯ ಮೊಣಕಾಲನ್ನು ಅಪ್ಪಿ ನಿಂತ ಒಂದು ಹುಡುಗ. ಆ ಹೆಂಗಸಿಗಿಂತಾ ಬಡಕಲು ಹೆಂಗಸನ್ನು ಜಂಬಂಣ ನೋಡೇ ಇರಲಿಲ್ಲ. ಮನೆಯಲ್ಲಿ ಅಂಥಾದ್ದೇನೂ ಇರಲಿಲ್ಲ. ಖಾಲಿನೋ ಖಾಲಿ. ಮೂಲೆಯಲ್ಲಿ ಒಂದೆರಡು ಪಾತ್ರೆಗಳು, ಈ ಕಡೆ ಗೋಡೆಗಂಟ್ಕಂಡು ಒಂದೆರಡು ಚಾಪೆಯ ಸುರುಳಿಗಳು. ಆ ಹೆಂಗಸಿಗೆ ಎದುರಾಗಿ ತನಗೆ ಬೆನ್ನು ಮಾಡಿ ಒಂದು ಬೋರಲಾದ ಪಾತ್ರೆ ಮೇಲೆ ಬಂಡಿ ಸಿದ್ದಪ್ಪ ಕೂತಿದಾನೆ. ಆ ಹೆಂಗಸು ಹೇಳ್ತಿದಾಳೆ 'ಅವರು ಯಲ್ಲೋಗಿದಾರೋ ಗೊತ್ತಿಲ್ಲ. ಆರು ತಿಂಗ್ಳಾದ್ವು. ಯಿವತ್ತು ಬರಬೋದು, ನಾಳೆ ಬರಬೋದು.'

'ನೋಡಮ್ಮಾ, ಅವನು ಯವತ್ತಾನಾ ಬರಲಿ. ನನ್ ಬಾಡಿಗೆ ಯಿವತ್ತು ಯಿಟ್ಟು, ಮನೆ ಕಾಲಿ ಮಾಡು. ಯಿನ್ನು



ಸೊಲ್ಪ ಹೊತ್ತಿಗೆಲ್ಲಾ ಕೂಲಿಗಳು ಬರ್ತಾರೆ. ಅಲ್ಲೀತಂಕ ಕಾಯುಸ್ಬೇಡ.' ಅಷ್ಟರಲ್ಲಿ ಜಂಬಂಣ ಮನೆಯೊಳಗೆ ಹೆಜ್ಜೆಯಿಟ್ಟದ್ದ. ಬಂಡಿ ಸಿದ್ದಪ್ಪನೆದುರು ಬಂದು ನಿಂತ. ಈಗ ಬಂಡಿ ಸಿದ್ದಪ್ಪಂಗೂ ಆ ಹೆಂಗಸಿಗೂ ನಡೂವೆ ಜಂಬಂಣ ನಿಂತಿದ್ದ. ಬಂಡಿ ಸಿದ್ದಪ್ಪನ ಬೆನ್ನು ಬಾಗಿಲ ಕಡೆಗಿತ್ತು. ಥಣ್ಣಗೆ ಜಂಬಂಣ ಹೇಳಿದ, 'ಮುಚ್ಕೆಂಡು ಹೋಗಿಲ್ಲಿಂದ.' ಬಂಡಿ ಸಿದ್ದಪ್ಪ ದಂಗಾಗಿ ನಿಂತ. ಕಣ್ಣು ಬಿಟ್ಕಂಡು ನಿಂತಿದ್ದ. ಜಂಬಂಣ ಕೂಗಿ ಹೇಳಿದ, 'ಹೋಗಲೇ.' ಬಂಡಿ ಸಿದ್ದಪ್ಪಂಗೆ ದನಿ ಬಂತು, 'ಯೇನಲೇ ತಲೆಕೆಟ್ಟದ್ಯಾ ನಿಂಗೆ? ನಾಲಿಗೆ ಹಿಡ್ದು ಮಾತಾಡು. ನಾನು ಈ ಮನೆ ಮಾಲೀಕ.' 'ಸುಡುಗಾಡು